ಶ್ರೀ ಎಂ.ವೈ.ಪಾಟೀಲ್(ಅಫಜಲ್‌ಪುರ):ಮಾನ್ಯ ಅಧ್ಯಕ್ಷರೆ, ದಿನಾಂಕ:25.6.2006 ರಂದು ಗುಲ್ಬರ್ಗಾ ಜಿಲ್ಲೆಯಲ್ಲಿ 5ಜನ ಮಕ್ಕಳ ಜಲಸಮಾಧಿಯಾಗಿದೆ. ನನ್ನ ಕ್ಷೇತ್ರದ ಗಾಣಗಾಪುರ ದೇವಸ್ಥಾನದ ಹತ್ತಿರ ಭೀಮಾನದಿಯ ಸಂಗಮದಲ್ಲಿ ಪ್ರವಾಹದಿಂದ ಇಬ್ಬರು ಬಾಲಕರು ಕೊಚ್ಚಿಕೊಂಡು ಹೋದರು. ಅದಾದ ನಂತರ ಅದೇ ದಿವಸ ಕಲ್ಬುರ್ಗಿ ನಗರದಲ್ಲಿ ಕೆರೆಯಲ್ಲಿ 3 ಜನ ಮಕ್ಕಳು ಜಲಸಮಾಧಿಯಾಗಿದ್ದಾರೆ. ಇಂತಹ ಸ್ಥಳಗಳಲ್ಲಿ ಪೋಲೀಸರ ಕಾವಲು ಆಗಬೇಕು ಎನ್ನುವುದು ನನ್ನದು. ಮುಂಜಾಗ್ರತೆಯ ಕ್ರಮವಾಗಿ ಸರ್ಕಾರ ಇದಕ್ಕೆ ಕಾವಲುಗಾರರನ್ನು ಇಡಬೇಕು ಎಂದು ಹೇಳಿ ನನ್ನ ವಿನಂತಿ ಇದೆ. ಈ ಮೃತ ಕುಟುಂಬಕ್ಕೆ ಪರಿಹಾರ ಸರ್ಕಾರ ಒದಗಿಸಬೇಕೆಂದು ಹೇಳಿ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಎಂ.ವೈ. ಪಾಟೀಲರು ಈ ವಿಷಯವನ್ನು ನಮ್ಮ ಗಮನಕ್ಕೆ ತಂದಿದ್ದಾರೆ ಲಕ್ಷ್ಮಿ ಹಾಗೂ ಗುರುರಾಜ್ ಎನ್ನುವ ಮಕ್ಕಳು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿ ಅಸುನೀಗಿದ್ದಾರೆ ಎನ್ನುವ ಮಾಹಿತಿಯನ್ನು ಕೊಟ್ಟಿದ್ದಾರೆ. ಇವತ್ತು ಅದು ಪತ್ರಿಕೆಯಲ್ಲಿ ಬಂದಿದೆ. ಈಗಾಗಲೇ ನಾನು ಜಿಲ್ಲಾಧಿಕಾರಿಗಳಿಗೆ ಸಂಪೂರ್ಣವಾದ ಮಾಹಿತಿಯನ್ನು ಕಳುಹಿಸಿಕೊಡಬೇಕೆಂದು ಸೂಚನೆಯನ್ನು ಕೊಟ್ಟಿದ್ದೇನೆ. ಮತ್ತು ಪರಿಹಾರದ ಬಗ್ಗೆ ಮತ್ತು ಇನ್ನಿತರ ರಕ್ಷಣೆಯ ಬಗ್ಗೆ ಅವರು ಹೇಳಿದ್ದಾರೆ. ಅದರ ಬಗ್ಗೆ ತೀವ್ರವಾದ ಗಮನವನ್ನು ಹರಿಸಿ ಎಲ್ಲಾ ರೀತಿಯ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

(ಅ) ಶ್ರೀನಿವಾಸಪುರ ಮತಕ್ಷೇತ್ರದಲ್ಲಿ ರಾಜಕೀಯವಾಗಿ ನಡೆಯುತ್ತಿರುವ ವರ್ಗಾವಣೆ ಹಾಗೂ ಇತರ ಇತರ ಅನ್ಯಾಯದ ಬಗ್ಗೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್ (ಶ್ರೀನಿವಾಸಪುರ): ಮಾನ್ಯ ಅಧ್ಯಕ್ಷರೆ, ಈ ರಾಜಕೀಯ ಬದಲಾವಣೆಗಳಾಗಿ ಹೊಸ ಸರ್ಕಾರ ಬಂದಮೇಲೆ ವರ್ಗಾವರ್ಗಿಯೂ ಕೂಡ ಅದಕ್ಕೆ ಕೋಇನ್‌ಸೈಡ್ ಆಗಿಬಿಂತು. ನನ್ನ ಕ್ಷೇತ್ರದ ಮಟ್ಟಿಗೆ ಆಗಿದ್ದರೆ ನಮ್ಮ ಮಾಜಿ ಶಾಸಕರು ಅವರ ಪಕ್ಷದಲ್ಲಿ ಸಕ್ರಿಯವಾಗಿದ್ದಾರೆ. ಸಂತೋಷ ಅವರವರ ಇಷ್ಟ. ಅಧಿಕಾರಿಗಳು ಏನು ಮಾಡುತ್ತಾರೆಂದರೆ, ಚುನಾವಣೆಯ ವೈಷಮ್ಯ ಇಟ್ಟುಕೊಂಡು ಅದಕ್ಕೊಂದು ರೀತಿ ನೀತಿ ತತ್ವ ಬದ್ಧತೆ ಏನೂ ಇಲ್ಲ. 44 ಗ್ರಾಮ ಪಂಚಾಯಿತಿಗಳು ಇದ್ದರೆ ರೆವಿನ್ಯೂ ಸರ್ಕಲ್ಸ್ 30ಜನ ವಿಲೇಜ್ ಅಕೌಂಟೆಂಟ್ಸ್‌ಗಳಿಗೆ ವರ್ಗಾವಣೆ, 25 ಗ್ರಾಮ ಪಂಚಾಯಿತಿಗಳು ಇದ್ದರೆ 18 ಜನ ಗ್ರಾಮ ಪಂಚಾಯಿತಿ ಸೆಕ್ರೆಟರಿಗಳಿಗೆ ವರ್ಗ. 3 ಪೋಲೀಸ್ ಸ್ಟೇಶನ್ ಇದ್ದರೆ 3 ಸಬ್‌ಇನ್ಸ್‌ಪೆಕ್ಟರ್‌ಗಳಿಗೆ ವರ್ಗಾವಣೆ. ಮಾಡಿಕೊಳ್ಳಿ ನೀವು ಯಾರಿಗೆ ಬೇಕಾದರು, ಬೇಕಾದರೆ ಅತನಿಗೆ ಡ್ರೆಸ್ ತಂದು ಕೊಟ್ಟು ತಂದಿಟ್ಟು ಬಿಡಿ ನನಗೆ ಏನೂ ಪ್ರಾಬ್ಲಮ್ ಇಲ್ಲ. ಇಲ್ಲಿ ನೋಡಿ ಮಾನ್ಯ ಹೊರಟ್ಟಯವರು ಕುಳಿತಿದ್ದಾರೆ. ಇವರು ಕೌನ್ಸಿಲ್‌ನಲ್ಲಿ ಬಹಳ ದೊಡ್ಡ ಹೋರಾಟವನ್ನು ಶಿಕ್ಷಕರ ಪರವಾಗಿ ಮಾಡಿದ್ದಾರೆ. ಮಾಜಿ ಶಾಸಕರು ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನು ಬರೆಯುತ್ತಾರೆ. ಏನು ಬರೆಯುತ್ತಾರೆಂದರೆ, ಈ ಕಳಕಂಡ ಪ್ರಾಥಮಿಕ ಶಿಕ್ಷಕ-ಶಿಕ್ಷಕಿಯರು ನನ್ನ ಕ್ಷೇತ್ರದಲ್ಲಿ ಕೆಲಸವನ್ನು ನಿರ್ವಹಿಸುತ್ತಿದ್ದು, ನಾವು ಮಾತ್ರಕ್ಕೆ ಕೆಲಸ ನಿರ್ವಹಿಸುತ್ತಾರೆ. ಇವರು

ಸ್ಥಳೀಯ ರಾಜಕೀಯದಲ್ಲಿ ಭಾಗವಹಿಸಿ ಸರಿಯಾಗಿ ಶಾಲೆಗೆ ಹಾಜರಾಗದೆ ಮಕ್ಕಳಿಗೆ ಪಾಠ ಪ್ರವಚನ ಸರಿಯಾಗಿ ಮಾಡದಿರುವ ಬಗ್ಗೆ ನನ್ನ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ಈ ಕೆಳಕಂಡವರನ್ನು ಶ್ರೀನಿವಾಸಪುರ ತಾಲ್ಲೂಕಿನಿಂದ ಬೇರೆ ಕಡೆಗೆ ವರ್ಗಾವಣೆ ಮಾಡಿಸಿ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ಮುಂದಿನ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ. ಮುಖ್ಯ ಮಂತ್ರಿಗಳು ಇದರ ಮೇಲೆ ವರ್ಗಾಹಿಸಿ ಎಂದು ಬರೆದು ಬಿಟ್ಟರು. ಸಜೆಶನ್ ಅವರೇ ಕೊಟ್ಟು ಬಿಟ್ಟಿದ್ದಾರೆ. ವೆಂಕಟೇಶಪ್ಪ ಬೇರೆ ಯಾವುದಾದರೂ ಜಿಲ್ಲೆಗೆ, ನಾರಾಯಣಸ್ವಾಮಿ ಬಾಗೇಪಲ್ಲಿ ತಾಲ್ಲೂಕಿಗೆ, ನಾಗರಾಜ ಗೌರಿಬಿದನೂರ ತಾಲ್ಲೂಕಿಗೆ ನರಸಿಂಹಯ್ಯ ಗುಲ್ಬರ್ಗಾ ಜಿಲ್ಲೆಗೆ ವೆಂಕಟರಮಣ ಚಿಕ್ಕೋಡಿ ಜಿಲ್ಲೆಗೆ, ಯಾರಿಗೆ ಎಂದರೆ ಪ್ರೈಮರಿ ಸ್ಕೂಲ್ ಮೇಷ್ಟಿಗೆ, ಅದನ್ನು ನೀವು ಸರ್ಕಾರದ ಆಜ್ಞೆಯನ್ನು ಯಥಾವತ್ತಾಗಿ ಹೊರಸಿದ್ದೀರಿ. ಇವತ್ತು ಶ್ರೀನಿವಾಸಪುರ ತಾಲ್ಲೂಕಿನ ಶಿಕ್ಷಕರೆಲ್ಲರೂ ಸೇರಿ ಅಲ್ಲಿ ಸ್ಟೈಕ್ ಮಾಡುತ್ತಿದ್ದಾರೆ. ಏನು ಸರ್ಕಾರ ನೀವು ನಡೆಸುತ್ತಿದ್ದೀರಿ? ನೀವು ಮೇಸ್ಟ್ರು ಆಗಿದ್ದವರು. ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿದ್ದೀರಿ. ಎಪಿಎಂಸಿಯಲ್ಲಿ ಸೈಟ್‌ಗಳನ್ನು ಮಾಡಿ ಎಂದರೆ ಮುಖ್ಯಮಂತ್ರಿ ಕಛೇರಿಯಿಂದ ಆದೇಶ. ಎಪಿಎಂಸಿ ಮಾರುಕಟ್ಟೆ ಶ್ರೀನಿವಾಸಪುರ ಮಾರ್ಕೆಟ್ ಆವರಣದ ಸೈಟ್ ವಿತರಣೆಯಲ್ಲಿ ದುರುಪಯೋಗ ಆಗಿದ್ದು ಹಂಚಿಕೆ ಮಾಡಿರುವ ಸೈಟ್‌ಗಳನ್ನು ಸಂಬಂಧಪಟ್ಟವರ ವಶಕ್ಕೆ ನೀಡದಂತೆ ತಡೆ ಹಿಡಿಯಬೇಕೆಂದು ಇದಕ್ಕೆ ಸಂಬಂಧಪಟ್ಟ ಕಡತವನ್ನು ಈ ಕೂಡಲೇ ಮಾನ್ಯ ಮುಖ್ಯಮಂತ್ರಿಗಳ ಅವಗಾಹನೆಗೆ ಸಲ್ಲಿಸುವಮತೆ ಕೋರಿದ್ದೇನೆ. ಇದು ಮುಖ್ಯಮಂತ್ರಿಗಳ ಆಫೀಸಿನಿಂದ ಬಂದ ಆದೇಶ. ಇನ್ನು ಮುಂದೆ ಶ್ರೀನಿವಾಸಪುರದಲ್ಲಿ 1 ಮತ್ತು 2ಕ್ಕೆ ಹೋಗಬೇಕಾದರೂ ಮುಖ್ಯಮಂತ್ರಿಗಳ ಒಂದು ಆದೇಸವನ್ನು ಕಳುಹಿಸಿ ಬಿಡಿ. ನಿಮ್ಮ ಆದೆಶದ ಪ್ರಕಾರ ಒಂದು ಮತ್ತು ಎರಡು ಮಾಡಿಕೊಳ್ಳುತ್ತೇವೆ. ಏನು ಇದು ಆಡಳಿತ ನಡೆಸುವ ವಿಧಾನವೇ? If they want to set the scores they started, let them be. ಏನಲ್ಲಾ ಮಾಡಬೇಕೆಂದು ಮಾಡಿದ್ದೀರಿ, ಮಾಡಿ. ನೂರು ಕೇಸುಗಳನ್ನು ನನ್ನ ಮೇಲೆ ಬೇಕಾದರೆ ಹಾಕಿ ನಾನು ತಡೆದುಕೊಳ್ಳುತ್ತೇನೆ. ಏನು ಬದಲಾಯಿಸಿದ್ದೀರಿ, ಇನ್ನೂ ಬದಲಾಯಿಸಿ. ಹಾಸ್ಟಲ್‌ಗಳಲ್ಲಿ ಅಡಿಗೆ ಮಾಡತಕ್ಕಂಥವರು ಒಬ್ಬಳು ಷೆಡ್ಯೂಲ್‌ಕಾಸ್ಟ್ ಹೆಣ್ಣು ಮಗಳು ಅವಳಿಗೆ ಒಂದು ಕಾಲು ಇಲ್ಲ. ಅವಳನ್ನು ಚಿಂಚೋಳಿಗೆ ವರ್ಗಾಹಿಸಿದ್ದಾರೆ. ಆತ ಬರೆದನಲ್ಲಾ ಅವರು ನಾಮಕಾವಸ್ತೆ ಶಾಲೆಗೆ ಹೋಗುವುದಿಲ್ಲ. ನಾಮಕಾವಸ್ತೆ ಕೆಲಸ ಮಾಡುತ್ತಿದ್ದಾರೆ. ಅಂತ ಬಿಇಒ ರಿಪೋರ್ಟ್ ತರಿಸಿಕೊಂಡಿದ್ದೀರಾ? ಬಿಡಿಪಿಇ ರಿಪೋರ್ಟ್ ತರಿಸಿಕೊಂಡಿದ್ದೀರಾ? ನಿಮ್ಮ ಕಮೀಷನರ್‌ಗೆ ಏನಾದರೂ ಸೆನ್ಸ್ ಇದೆಯಾ? Is this the way you run the government? ಇದಕ್ಕೆ ನೀವು ಸ್ಟಿಕಾನ್ ಆಗುವುದಾದರೆ ಆಗಿ. ನಾವು ರಾಜಕೀಯವಾಗಿ ಫೇಸ್ ಮಾಡುತ್ತೇವೆ. ಇವರು ಯಾರೂ ಒಬ್ಬರು ಡ್ಯೂಟಿಗೆ ರಿಪೋರ್ಟ್ ಮಾಡಿಕೊಳ್ಳುವುದಿಲ್ಲ. ಪೇಪರ್‌ನಲ್ಲಿ ಇದೆ. ಎಲ್ಲಾ ಇದೆ ನಾವು ಹೋರಾಟ ಮಾಡುತ್ತೇವೆ. ಇದೇನೂ ಹೊಸದೇನಲ್ಲ. ನಾನು ಯಾರ ಮರ್ಜಿ ಮುಲಾಜಿಗೆ ಇಲ್ಲಿಗೇ ಬಂದವನಲ್ಲ. ನೀವೆಲ್ಲ ಇಂತಹ ಸ್ಟಂಟ್‌ಗಳನ್ನು ಮಾಡಿ ಬಗ್ಗಿಸಬೇಕೆಂದು ತಿಳಿದಿದ್ದರೆ ಅದು ನಿಮ್ಮ ಕನಸು ಅಷ್ಟೆ. ಈ ಮೇಷ್ಟುಗಳು ಅಷ್ಟೇ. ನಿಮಗೆ ಯಾರೂ ಬಗ್ಗುವುದಿಲ್ಲ.

ರಮೇಶ್ರೆಡ್ಡಿ ಎಂಬ ಕುಂಟ ಇದ್ದಾನೆ ಅವನಿಗೆ ಕಾಲೇ ಇಲ್ಲ ಅವನಿಗೆ ಬಳ್ಳಾರಿ ಜಿಲ್ಲೆಗೆ ಹಾಕಿದ್ದಾರೆ. ಅವನನ್ನು ಕರೆಸಿ ಕಾಲು ಸರಿ ಇದೆ ಎಂದು ನೋಡಿ. ನಾಚಿಕೆ ಬರುವುದಿಲ್ಲವೇ?

ಅಧ್ಯಕ್ಷರು: ಮಾನ್ಯ ರಮೇಶ್‌ಕುಮಾರ್‌ರವರೆ, ನೀವು ಎಮೋಷನಲ್ ಆಗಬೇಡಿ.

ಶ್ರೀ ಕೆ. ಆರ್. ರಮೇಶ್‌ಕುಮಾರ್: ಏನು ಸಾರ್, ಅಧಿಕಾರ ಬರುತ್ತದೆ, ಹೋಗುತ್ತದೆ ಅಧಿಕಾರ ಹೀಗೆ ಉಪಯೋಗ ಮಾಡುವುದು: ನಾವು ಬಹಳ ಜನರನ್ನು ನೋಡಿದ್ದೇವೆ.

ಅಧ್ಯಕ್ಷರು: ಆಯಿತು, ಎಮೋಷನಲ್ ಆಗಬೇಡಿ.

(ಅಡಚಣೆ)

ಅಧ್ಯಕ್ಷರು: ಮಾನ್ಯ ಹೊರಟ್ಟಿಯವರೆ, ತಾವು ಉತ್ತರವನ್ನು ಹೇಳಿ. ಎಲ್ಲರೂ ದಯಮಾಡಿ ಕುಳಿತುಕೊಳ್ಳಿ. ನಾನು ಎದ್ದುನಿಂತಿರುವಾಗ ನೀವು ಹೀಗೆ ಗಲಾಟೆ ಮಾಡಿದರೆ ಏನೂ ಮಾಡುವುದಕ್ಕಾಗುವುದಿಲ್ಲ.

(ಅಡಚಣೆ)

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ: ಹಿಂದಿನ ಸರ್ಕಾರದಲ್ಲಿ ಅವರು ಏನು ಮಾಡಿದ್ದಾರೆ ಎನ್ನುವುದನ್ನು ಕಡತ ತರಿಸಿ ನೋಡಿ.

(ಅಡಚಣೆ)

ಅಧ್ಯಕ್ಷರು: ಈ ರೀತಿ ಗಲಾಟೆ ಮಾಡುವುದರಿಂದ ಸದನ ನಡೆಸುವುದು ಬಹಳ ಕಷ್ಟವಾಗುತ್ತದೆ. ಇದರಿಂದ ಸದನಕ್ಕೆ ಗೌರವ ತರುವುದಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ರಮೇಶ್‌ಕುಮಾರ್‌ರವರು ಶೂನ್ಯ ವೇಳೆಯಲ್ಲಿ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಮಾನ್ಯ ಮಂತ್ರಿಗಳು ಏನಾದರೂ ವಿವರಣೆ ಕೊಡುತ್ತಾರೆ. ದಯಮಾಡಿ ಕುಳಿತುಕೊಳ್ಳಿ.

(ಅಡಚಣೆ)

1.30 pm

ಅಧ್ಯಕ್ಷರು: ಈಗ ಶೂನ್ಯವೇಳೆಯಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಬೇರೆ ಸಮಯವನ್ನು ಗೊತ್ತು ಮಾಡುತ್ತೇನೆ. ಚರ್ಚೆಯಾಗಬೇಕೆಂದರೆ ಅದಕ್ಕೆ ಸಮಯ ಗೊತ್ತುಮಾಡುತ್ತೇನೆ. ಅದರ ಬಗ್ಗೆ ನನ್ನದೇನೂ ಅಭ್ಯಂತರವೇನು ಇಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಒಬ್ಬ ಮಾನ್ಯ ಸದಸ್ಯರು: ನಮಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ

ಅಧ್ಯಕ್ಷರು: ಇಲ್ಲಿ ಏನಾಗಿದೆ ಎಂದರೆ, ಶೂನ್ಯವೇಳೆ ನಿನ್ನೆ ದಿನ ನಡೆದಿದೆ. ಈ ತರಹದ ನಿಯಮಾವಳಿಗಳನ್ನು ಎಲ್ಲರೂ ಮುರಿದುಮುರಿದು ಮಾತನಾಡುವುದಾದರೆ, ಸದನ ನಡೆಸಬೇಕೆಂದರೆ ನನ್ನದೇನೂ ಅಡ್ಡಿಯಿಲ್ಲ.

ಶ್ರೀ ಎನ್.ಧರ್ಮಸಿಂಗ (ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ತಾಳಿ ಮಾನ್ಯ ರಮೇಶ್‌ಕುಮಾರ್‌ರವರು ವಿಧಾನಸಭೆಯಲ್ಲಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ ಹಾಗೂ ಹಿರಿಯ ಸದಸ್ಯರಾಗಿದ್ದಾರೆ. ಅವರು ಏನು ಪ್ರಸ್ತಾಪ ಮಾಡುತ್ತಿದ್ದಾರೆಂದರೆ, ಇವತ್ತು ಮತಕ್ಷೇತ್ರದಲ್ಲಿ

ರಾಜಕೀಯವಾಗಿ ಏನಾಗಿದೆ ಎಂಬುದರ ಬಗ್ಗೆ ಹೇಳುತ್ತಿದ್ದಾರೆ. ಇದು ಕೇವಲ ವಿಧಾನಸಭೆಯಲ್ಲಿ ಮಾತ್ರವಲ್ಲ, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಮಾತನಾಡುವಂತಹ ಕಾಲದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದರು, ಮಾನ್ಯ ಖರ್ಗೆಯವರೂ ಕೂಡ ಇದ್ದರು. ಆವಾಗ ಕೂಡ ಹೇಳಿದ್ದಾರೆ. ಎಲ್ಲಾ ಕಡೆಗಳಲ್ಲಿ ಅಡಿಗೆ ಮಾಡುವವರನ್ನೂ ಕೂಡ ಹೊರಗಡೆ ಹಾಕಿದ್ದೀರಿ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಎದುರುಗಡೆಯೇ ಹೇಳಿದ್ದಾರೆ. ಇವತ್ತು ಯಾವಗಲೂ ಕೂಡ ಅವರ ಕ್ಷೇತ್ರಕ್ಕೆ ಏನು ಅನ್ಯಾಯವಾಗಿದೆ, ಅದರ ಬಗ್ಗೆ ಪ್ರಸ್ತಾಪ ಮಾಡತಕ್ಕಂತಹ ಕಾಲದಲ್ಲಿ ಎಲ್ಲರೂ ಕೂಡ ಎದ್ದುನಿಂತುಕೊಂಡು ಮಾತನಾಡುವುದು ಸರಿ ಅಲ್ಲ. ನಿಮಗೆ ಕುಮಾರಸ್ವಾಮಿ ಹಾಗೂ ಸರ್ಕಾರದ ಬಗ್ಗೆ ಎಷ್ಟು ಗೌರವವಿದೆ ಎನ್ನುವುದು ನೀವು ಮಾಡಿ ನಿಮಗೆ ಅಧಿಕಾರವಿದೆ. ಅದರ ಬಗ್ಗೆ ನಾನು ಹೇಳುತ್ತಿಲ್ಲ. ಇವತ್ತು ಮಾನ್ಯ ಸದಸ್ಯರಾದ ಶ್ರೀ ರಮೇಶ್‌ಕುಮಾರ್ ಕೇಳುತ್ತಿದ್ದಾರೆ, ಸದನದಲ್ಲಿ ಮಾನ್ಯ ಹೊರಟ್ಟಿಯವರು ಇದ್ದಾರೆ ಮತ್ತು ಗೃಹಸಚಿವರೂ ಕೂಡ ಇಲ್ಲಿ ಇದ್ದಾರೆ ಇದರ ಬಗ್ಗೆ ಉತ್ತರವನ್ನು ಕೊಡೇಕು. ಈ ತರಹ ರಾಜಕೀಯವಾಗಿ ಎಲ್ಲಾ ಕಡೆಗೆ ಇದು ಒಂದೇ ಕಡೆ ಆಗಿಲ್ಲ. ವರ್ಗಾವಣೆಯ ವಿಷಯದ ಬಗ್ಗೆ ನಾವು ಹೇಳುತ್ತಿಲ್ಲ. ನಿಮ್ಮ ಪಕ್ಷದ ಶಾಸಕರು ಇವತ್ತಿನ ದಿವಸ ಬಹಿರಂಗವಾಗಿ ಯಾವ ರೀತಿಯಾಗಿ ವರ್ಗಾವಣೆ ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿದೆ ಎನ್ನುವುದರ ಬಗ್ಗೆ ಹೇಳಿದ್ದಾರೆ. ನಾವು ಹೇಳಬೇಕಾದುದು ಏನೂ ಇಲ್ಲ. ನನ್ನ ಮಂತ್ರಿಮಂಡಲದಲ್ಲಿ ಸದಸ್ಯರಾಗಿರದಂತಹ ಮಾನ್ಯ ಬಯ್ಯಾಪುರ್‌ರವರು ಹೇಳುತ್ತಿದ್ದಾರೆ. ಏನಾಗಿದೆ ಎಂಬುದರ ಬಗ್ಗೆ ತೆಗೆಸಿ ಹಿಂದಿನ ಕಡತ ಸರಿಸಿ ಎಂದು ಹೇಳಿದ್ದಾರೆ. ಹಿಂದಿನ ಸರ್ಕಾರದಲ್ಲಿ ನಮ್ಮದು ಅದೇ ಗತಿ, ನಿಮಗೆ ಎಷ್ಟು ಉಪಕಾರವನ್ನು ಮಾಡಿದ್ದೇನೆ ಮತ್ತೆ ಯಾರಿಗೂ ಕೂಡ ಅಷ್ಟು ಉಪಕಾರವನ್ನು ಮಾಡಿರುವುದಿಲ್ಲ. ಎಲ್ಲಾ ಕಡೆಗೂ ಕೂಡ ನಾವು ಸರಿಸಮಾನವಾಗಿ ವರ್ಗಾವಣೆ ಮಾಡತಕ್ಕಂತಹ ಕಾಲದಲ್ಲಿ ಯಾರ್ಯಾರು ಮಂತ್ರಿಗಳಿದ್ದಾರೆ, ಶಾಸಕರು ಇದ್ದಾರೆ ಅವರನ್ನು ಕೇಳಿ ವರ್ಗಾವಣೆಯನ್ನು ಮಾಡಿದ್ದೇವೆ. ಇವತ್ತು ಈ ತರಹದ ಬೇಜಾರಾಗಿದೆ, ತಾವೆಲ್ಲರೂ ಹಿರಿಯರಿದ್ದೀರಿ, ತಾವೆಲ್ಲರೂ ಕೂಡ ಸರ್ಕಾರವನ್ನು ನಡೆಸಬೇಕಾಗಿದೆ. ಸರ್ಕಾರ ನಡೆಸತಕ್ಕಂತಹ ಕಾಲದಲ್ಲಿ ಈ ರೀತಿ ಮಾಡುವುದಲ್ಲ. ಈ ರೀತಿಯ ಒಂದು ತಾರತಮ್ಯವನ್ನು ಮಾಡಿ ನೀವು ವಿರೋಧ ಪಕ್ಷದವರನ್ನು ಬಗ್ಗಿಸಬೇಕೆಂದು ಮಾಡುತ್ತಿದ್ದೀರಿ,

(ಅಡಚಣೆ)

ಅಧ್ಯಕ್ಷರು: ಎಲ್ಲರೂ ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸದಸ್ಯರು ಬಹಳ ಗಂಭೀರವಾದಂತಹ ಪ್ರಶ್ನೆಯನ್ನು ಅವರ ಮತಕ್ಷೇತ್ರದ ಬಗ್ಗೆ ಎತ್ತಿದ್ದಾರೆ. ನೀವು ನಿಮ್ಮ ಭಾವನೆಗಳನ್ನು ಏನು ವ್ಯಕ್ತ ಮಾಡಿದ್ದೀರಿ ಅವೆಲ್ಲವೂ ಸತ್ಯವೇ ಆಗಿದೆ. ಯಾರು ಆಡಳಿತವನ್ನು ನಡೆಸುತ್ತಾರೆ, ಅವರು ಸೇಡು ತೀರಿಸಿಕೊಳ್ಳುವಂತಹ ಮನೋಧರ್ಮರಾಯ ಎಂದರೆ ಯಾರೂ ಕೂಡ ಒಪ್ಪುವುದಕ್ಕಗುವುದಿಲ್ಲ. ಬಹಳ ಜನರು ಇದ್ದಾರೆ. ನಾನು ಎಲ್ಲರೂ ಎಂದು ಹೇಳುವುದಿಲ್ಲ. ಅವೆಲ್ಲವೂ ನಡೆದಿದ್ದಾವೆ, ಹಿಂದಿನದೆಲ್ಲವನ್ನೂ ಎತ್ತುವುದು ಅಂದರೆ, ಹಿಂದೆಯೂ ಅದೇ ಆಗಿದೆ. ಇವತ್ತೂ ಕೂಡ ಅದೇ, ಈ ವ್ಯವಸ್ಥೆ ಮುಂದುವರೆದರೆ ಮುಂದೆಯೂ ಅದೇ ಆಗುತ್ತದೆ. ಆ ಕಾರಣದಿಂದ ಅದರ ಬಗ್ಗೆ

ಹೇಳುವುದು ಬೇಡ. ಇಲ್ಲಿ ಮಾನ್ಯ ರಮೇಶ್‌ಕುಮಾರ್‌ರವರು ಇದ್ದಾರೆ. ಅದರ ಬಗ್ಗೆ ಸೂಕ್ಷ್ಮವಾಗಿ ಹೇಳಲಿ. ಸುಮ್ಮನೆ ಏತಕ್ಕೆ ಮಾತನಾಡುತ್ತೀರಿ? ಎಲ್ಲರ ಕಥೆಯೂ ಆಷ್ಟೆ. ಪ್ರಜಾಪ್ರಭುತ್ವವ್ಯವಸ್ಥೆಯಲ್ಲಿ ಈ ಮಟ್ಟಕ್ಕೆ ಈ ದೇಶ ತಲುಪಿದೆ.

ಶ್ರೀ ಬಸವರಾಜರಾಯರೆಡ್ಡಿ: ಈ ರೀತಿಯಾಗಿ ತಾವೇ ಮಾತನಾಡಿದರೆ ಹೇಗೆ?

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಅವರು ಎಲ್ಲವನ್ನೂ ಹೇಳುತ್ತಾರೆ. ಏನೆಂದರೆ ಜನರಲೈಸ್ ಮಾಡುವುದು ಒಳ್ಳೆಯದಲ್ಲ. ಅಲ್ಲಿ ಏನಾಗಿದೆ ಎಂಬುದರ ಬಗ್ಗೆ ಎಲ್ಲಾ ಗೊತ್ತಿರುವ ಬಗ್ಗೆ ಹೇಳಿದ್ದೇನೆ. ತಾವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್: ತಮ್ಮ ಪೀಠದಿಂದ ತಮ್ಮ ಬಾಯಿಯಿಂದ ಈ ಮಾತು ಬರಬಾರದು.

ಅಧ್ಯಕ್ಷರು: ಆಯಿತು. ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್: ಆಯಿತು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು: ಆಯಿತು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಹೊರಟ್ಟಿಯವರೇ, ತಾವು ಮಾತನಾಡಿ. ಏನಾದರೂ ಇದ್ದರೆ ಹೇಳಿ.

ಶ್ರೀ ಬಸವರಾಜಹೊರಟ್ಟಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು): ಮಾನ್ಯ ಸಭಾಧ್ಯಕ್ಷರೆ, ನಾನು ಮಾನ್ಯ ಸದಸ್ಯರಾದ ರಮೇಶ್‌ಕುಮಾರ್‌ರವರು ಹೇಳಿರುವಂತಹ ವಿಷಯವನ್ನು ಗಮನಿಸಿದ್ದೇನೆ. ಇವತ್ತು ಏನಾಗಿದೆ ಎಂದರೆ ವರ್ಗಾವಣೆ ನೀತಿಯನ್ನು ತರಬೇಕೆಂದು ತೀರ್ಮಾನ ಮಾಡಿದ್ದೇವೆ. ಅನೇಕ ಜನರು ಅಂತರ್‌ಜಿಲ್ಲೆಗಳಿಂದ ಅಪಾಯಿಂಟ್‌ಮೆಂಟಾಗಿ ಹೋಗಿದ್ದರು. ಇವತ್ತು ಒಂದೊಂದು ಜಿಲ್ಲೆಯಲ್ಲಿ ತಾವು ಹೇಳಿದಹಾಗೆ 42 ಸಾವಿರ ಅಪ್ಲಿಕೇಷನ್ಸ್‌ಗಳು ಬಂದಿವೆ. 9 ಸಾವಿರ ಅರ್ಜಿಗಳು ಶಾಸಕರು ಹಾಗೂ ಮಂತ್ರಿಗಳಿಂದ ಬಂದಿವೆ. ನಾವು ವರ್ಗಾವಣೆ ಮಾಡುವಾಗ ಏನೇನು ಅರ್ಜಿಗಳು ಬಂದಿವೆ ಮುಖ್ಯಮಂತ್ರಿಗಳ ಕಡತ ಬಂದಿದ್ದರೆ ನಾನು ಹಾಗೆಯೇ ಕಳುಹಿಸಿ ಕೊಟ್ಟಿದ್ದೇನೆ: ನಿಜ. ಆದಾದನಂತರ ಎಲ್ಲಾ ಕಡೆಗಳಲ್ಲಿ ಅಂದರೆ ಗುಲ್ಬರ್ಗಾ, ಚಿಕ್ಕೋಡಿ, ರಾಯಚೂರು ಅಲ್ಲಿ ಟೀಚರ್ಸ್‌ಗಳು ಇರುವುದಿಲ್ಲ ಎಲ್ಲರೂ ಈ ಕಡೆಗೆ ವರ್ಗಾವಣೆ ಆಗಿ ಬಂದಿದ್ದಾರೆ. ಚಿಕ್ಕೋಡಿಯಲ್ಲಿ 486 ಜನರು ವರ್ಗಾವಣೆಯಾಗಿದ್ದಾರೆ. 30 ಜನರು ಒಳಗೆ ಬಂದಿದ್ದಾರೆ. 456 ಜನರು ಹೊರಗಡೆ ವರ್ಗಾವಣೆಯಾಗಿ ಹೋಗಿದ್ದಾರೆ. ಹಾಗಾದರೆ ನಾವು ಶಾಲೆಗಳನ್ನು ನಡೆಸುವುದು ಹೇಗೆ? ಇಮ್ಮೀಡಿಯೇಟ್‌ಲಿ ನಾನು 31ರ ನಂತರ ಒಂದು ಪರ್ಸೆಂಟ್‌ಗಿಂತ ಯಾವುದೂ ವರ್ಗಾವಣೆಯಾಗಿಲ್ಲ. ಈಗ ಟೋಟಲ್ ಆ ಜಿಲ್ಲೆಯಲ್ಲಿ 7 ಸಾವಿರ ಜನ ಶಿಕ್ಷಕರು ಇದ್ದರೆ 70 ಜನ ಶಿಕ್ಷಕರನ್ನು ಅಂದರೆ ಒಂದು ಪರ್ಸೆಂಟ್ ರಿಲೀವ್ ಮಾಡಿದ್ದೇವೆ. ಆ ನಂತರ ಯಾರನ್ನೂ ಕೂಡ ರಿಲೀವ್ ಮಾಡಿರುವುದಿಲ್ಲ. ಏನು ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ್ದಾರೆ. ಆ ರೀತಿಯಾಗಿದೆ ನಾವು ಒಪ್ಪಿಕೊಳ್ಳುತ್ತೇವೆ. ಅವೆಲ್ಲವನ್ನೂ ಯಾವುದು ಹಾಗೆ ಆಗಿವೆ ಅವರನ್ನು ರಿಲೀವ್ ಮಾಡಬೇಡಿ ಎಂದು ಆರ್ಡರ್ ಮಾಡಿದ್ದೇವೆ. ಇವತ್ತಿಗೂ ಕೂಡ ರಿಲೀವ್ ಮಾಡುವುದಿಲ್ಲ. ಈಗ ಪ್ರಶ್ನೆ ಬಂದಿರುವುದು ಏನೆಂದರೆ

ಎಲ್ಲಾ ಕಡೆಗಳಲ್ಲಿ ಶಿಕ್ಷಕರು ಬರುವಂತಹ ದಿನಗಳಲ್ಲಿ ನಿಯಮಾವಳಿಗಳನ್ನು ತರಬೇಕೆಂದು ಹಾಗೂ ಬಿಲ್ ತರಬೇಕೆಂದು ಮಾಡಿದ್ದರಿಂದ ಲಿಬರಲ್ ಆಗಿ ಮಾಡಿ ಎಂದು ಸಚಿವಸಂಪುಟದಲ್ಲಿ ಈ ಬಗ್ಗೆ ಚರ್ಚೆಯಾಗಿದೆ. ಅದಕ್ಕಾಗಿ ಆ ರೀತಿಯಾಗಿ ಮಾಡಿದ್ದೇವೆ. ಯಾವುದೇ ಶಿಕ್ಷಕರನ್ನು ಆ ರೀತಿಯಾಗಿ ರಿಲೀವ್ ಮಾಡುವಹಾಗಿಲ್ಲ. ಹೊಸ ನೇಮಕಾತಿ ಆದನಂತರ ಆಗ ಏನೆಂದರೆ, ಇವರು ಏನು ಬೇರೆ ಬೇರೆ ಜಿಲ್ಲೆ ಪ್ರೈಮರಿ ಶಾಲೆ ಟೀಚರ್ ಹೋಗಿ ರಾಯಚೂರು ಮತ್ತು ಗುಲ್ಬರ್ಗಾಕ್ಕೆ ಹಾಕುವುದು ನಾನು ಸಹಿತ ಅದಕ್ಕೆ ಒಪ್ಪಿಗೆ ಕೊಡುವುದಿಲ್ಲ. ಅವೆಲ್ಲವನ್ನು ಸರಿ ಮಾಡುವಂತಹ ಕೆಲಸವನ್ನು ಮಾಡುತ್ತೇನೆ. ಬಹಳಷ್ಟು ಕಡೆಗಳಲ್ಲಿ ಆಗಿದೆ. 42 ಸಾವಿರ ಅರ್ಜಿಗಳು ಬಂದಾಗ ನಾನು ನೋಡುವುದಕ್ಕಾಗಲಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಂದ ಹಾಗೂ ಮಾನ್ಯ ಮಂತ್ರಿಗಳಿಂದ ಬಂದಂತಹ ಅರ್ಜಿಗಳನ್ನು ನಾನು ಕಳುಹಿಸಿಕೊಟ್ಟಿರುವುದು ನಿಜ. ಆದ್ದರಿಂದ ಎಲ್ಲಾ ತಪ್ಪುಗಳನ್ನು ಸರಿಮಾಡುವಂತಹ ವ್ಯವಸ್ಥೆಮಾಡುತ್ತೇನೆ. ಇವತ್ತು ಯಾರಿಗೆ ಅನ್ಯಾಯವಾಗಿದೆ ಅದನ್ನು ಸರಿಪಡಿಸುವಂತಹ ಕೆಲಸವನ್ನು ನಾನು ಮಾಡುತ್ತೇನೆ. ಇವತ್ತು ಯಾರು ಶಾಸಕರು ಕೊಟ್ಟಿದ್ದಾರೆ, ಮಂತ್ರಿಗಳು ಕೊಟ್ಟಿದ್ದಾರೆ ಬೇರೆಯವರು ಕೊಟ್ಟಿದ್ದಾರೆ, ನಾನು ಅವರಿಗೆ ಅನುಕೂಲವಾಗಲಿ ಎನ್ನುವಂತಹ ದೃಷ್ಟಿಬಿಂದ ಮಾಡಿದ್ದು ನಿಜ. ಈಗ ಆ ತಪ್ಪುಗಳನ್ನು ಸರಿಪಡಿಸಿ ಅಂತಹವರು ಏನು ಹೊರಗಡೆ ಹೋಗುವಂತಹವರು ಏನಾ: ಕಾರಣ ರಾಜಕೀಯ ಮಾಡುತ್ತಿದ್ದಾರೆಂದು ಹೇಳಿದರು, ಈಗ ಯಾವನೇ ಒಬ್ಬನನ್ನು ವರ್ಗಾವಣೆ ಮಾಡಬೇಕಾದರೆ ಅವನ ಬಗ್ಗೆ ತಕರಾರು ಇದ್ದರೆ ತಾವು ಬಿಇಡಿ ಹಾಗೂ ಡಿಡಿಪಿಐ ವರದಿ ತರಿಸಿದ್ದೀರಾ ಎಂದು ಕೇಳಿದರು. ಆ ರೀತಿಯಾಗಿ 42 ಸಾವಿರ ಅರ್ಜಿಗಳಿಗೂ ವರದಿ ತರಿಸುವುದಕ್ಕಾಗುವುದಿಲ್ಲ. ಯಾರದ್ದು ತಕರಾರು ಇದ್ದರೆ ಶಾಲೆಗೆ ಕಳುಹಿಸದಿದ್ದರೆ, ಬಿಇಒರವರು ಅದರ ಬಗ್ಗೆ ಎನ್‌ಕ್ವಾಯರಿ ಮಾಡಿ ಅವನದು ತಪ್ಪು ಇದೆ ವರ್ಗಾವಣೆ ಮಾಡಿ ಎಂದರೆ ಕಾನೂನಿನಲ್ಲಿ ಅವಕಾಶವಿದ್ದರೆ ಮಾತ್ರ ಮಾಡಬೇಕು. ಅದರೆ ಈ ರೀತಿಯಾಗಿ ಮಾಡುವುದಕ್ಕಾಗುವುದಿಲ್ಲ. ಈ ಪರಿಸ್ಥಿತಿಯಲ್ಲಿ ಮಾಡಿದ್ದೇವೆ, ಇದರ ಬಗ್ಗೆ ನಾನು ಪ್ರಾಕ್ಟಿಕಲ್ ಆಗಿ ಹೇಳುತ್ತಿದ್ದೇನೆ. ಈ ದೃಷ್ಟಿಬಿಂದ ಯಾರ್ಯಾರಿಗೆ ಅನ್ಯಾಯವಾಗಿದೆ ಅದನ್ನು ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇವೆ. ಅವರು ಏನು ಹೊಗೆ ಹಾಕಿದ್ದಾರೆ ಅವರಿಗೆ ಹೊರಗೆ ಹಾಕದಂತೆ ಅಲ್ಲಿರುವಂತೆ ನೋಡುತ್ತೇವೆ. ತಾಲ್ಲೂಕಿನಲ್ಲಿ ಅಲ್ಲೇ ಏನಾದರೂ ಅಡ್ಜಸ್ಟ್ ಮಾಡಿದರೆ ಅಲ್ಲಿಯೇ ಮಾಡಿಕೊಳ್ಳಲಿ ಅದನ್ನು ಬಿಟ್ಟು ಜಿಲ್ಲೆಯನ್ನು ಬಿಟ್ಟು ಬೇರೆ ಬೇರೆ ಡಿವಿಜನ್ ಬಿಟ್ಟು ಹಾಕುವುದಿಲ್ಲ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವೈಜನಾಥಪಾಟೀಲ್: ಮಾನ್ಯ ಅಧ್ಯಕ್ಷರೆ, ಒಂದು ವಿಚಾರ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ.

ಶ್ರೀ ವೈಜನಾಥಪಾಟೀಲ್: ಚಿಂಚೋಳಿ ತಾಲ್ಲೂಕಿನಿಂದ 150 ಟೀಚರ್ಸ್‌ಗಳನ್ನು ವರ್ಗಾವಣೆ ಮಾಡಿದ್ದಾರೆ.

ಅಧ್ಯಕ್ಷರು: ಅದಕ್ಕೆಲ್ಲಾ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ದಯಮಾಡಿ ಕುಳಿತುಕೊಳ್ಳಬೇಕು. ತಾವು ಹಿರಿಯ ಸದಸ್ಯರಾಗಿದ್ದೀರಿ. ಈಗ ಮಾನ್ಯ ಮಾಧುಸ್ವಾಮಿಯವರು ತಾವು ಮಾತನಾಡಿ.

ಶ್ರೀ ವೈಜನಾಥಪಾಟೀಲ್: ಮಾನ್ಯ ಅಧ್ಯಕ್ಷರೆ, ನಾನು ಹೇಳುವುದನ್ನು ತಾವು ಕೇಳಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ: ಸನ್ಮಾನ್ಯ ಅಧ್ಯಕ್ಷರೆ:

ಶ್ರೀ ವೈಜನಾಥಪಾಟೀಲ್: ನಾವು ಹೇಳುವುದನ್ನು ತಾವು ಕೇಳುತ್ತೀರೋ ಅಥವಾ ಇಲ್ಲವೋ.

ಅಧ್ಯಕ್ಷರು: ದಯಮಾಡಿ ತಾವು ಕುಳಿತುಕೊಳ್ಳಬೇಕು.

ಶ್ರೀ ವೈಜನಾಥಪಾಟೀಲ್: ಈ ರೀತಿ ಮಾಡಿದರೆ ಹೇಗೆ? ತಾವು ಕೇಳುವುದಿಲ್ಲವೆಂದರೆ ಹೇಗೆ? ದಯಮಾಡಿ ಸ್ವಲ್ಪ ತಾವು ಮಾನ್ಯ ಮಾಧುಸ್ವಾಮಿಯವರೆ, ತಾವು ಯೀಲ್ಡ್ ಆಗಬೇಕು.

ಅಧ್ಯಕ್ಷರು: ಮಾನ್ಯ ಮಾಧುಸ್ವಾಮಿಯವರೇ, ತಾವು ಶೂನ್ಯವೇಳೆಯಲ್ಲಿ ಕೇಳಿದ್ದೀರಿ, ಅದು ಚರ್ಚೆಗೆ ಅವಕಾಶವಿಲ್ಲ. ಅದು ಮುಕ್ತಾಯವಾಗಿದೆ. ನೀವು ದಯಮಾಡಿ ಕೇಳಿ. ಮಾನ್ಯ ವೈಜನಾಥ್‌ಪಾಟೀಲ್‌ರವರೆ ಅದು ಮುಕ್ತಾಯವಾಗಿದೆ. ಶೂನ್ಯ ವೇಳೆಯಲ್ಲಿ ಆ ರೀತಿಯಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ವೈಜನಾಥಪಾಟೀಲ್: ಶಾಲೆಗಳೆಲ್ಲಾ ಖಾಲಿ ಇವೆ.

ಅಧ್ಯಕ್ಷರು: ನೀವು ಅದರ ಬಗ್ಗೆ ನೋಟೀಸ್‌ನ್ನು ಕೊಟ್ಟಿರುವುದಿಲ್ಲ. ದಯಮಾಡಿ ತಾವು ಕುಳಿತುಕೊಳ್ಳಬೇಕು. ಈ ರೀತಿಯಾಗಿ ನೀವು ವರ್ತಿಸುವುದು ಸರಿಯಲ್ಲ.

ಶ್ರೀ ವೈಜನಾಥಪಾಟೀಲ್: ಹಾಸನ ಜಿಲ್ಲೆಯಿಂದ 200 ಜನರು ಅಲ್ಲಿಂದ ಇಲ್ಲಿಗೆ ಬಂದಿದ್ದಾರೆ.

ಅಧ್ಯಕ್ಷರು: ಮಾನ್ಯ ವೈಜನಾಥ್ ಪಾಟೀಲ್‌ರವರು ಹೇಳುವುದು ಯಾವುದೂ ಕೂಡ ರೆಕಾರ್ಡ್‌ಗೆ ಹೋಗುವುದಿಲ್ಲ. ಮಾನ್ಯ ವೈಜನಾಥ ಪಾಟೀಲ್‌ರವರು ಮಾತನಾಡುವುದು ಯಾವುದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಈ ಹಂತದಲ್ಲಿ ಮಾನ್ಯ ವೈಜನಾಥಪಾಟೀಲ್‌ರವರು ಮಾತನಾಡಿರುವುದನ್ನು ಸಭಾಧ್ಯಕ್ಷರ ಅಪ್ಪಣೆಯ ಮೇರೆಗೆ ದಾಖಲಿಸಿಕೊಳ್ಳಲಿಲ್ಲ)

ಅಧ್ಯಕ್ಷರು: ಯಾವುದೇ ರೀತಿಯಲ್ಲಿ ಕೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲರೂ ನಿಯಮಗಳನ್ನು ಮುರಿದುಹೋದರೆ ಅದು ನೋ. ಮಾನ್ಯ ಮಾಧುಸ್ವಾಮಿಯವರೇ, ತಾವು ಕೇಳಿ. ತಾವು ಕೇಳುವುದಿಲ್ಲವೆಂದರೆ ನಾನು ಮುಂದಕ್ಕೆ ಹಾಕಿಬಿಡುತ್ತೇನೆ. ಮಾನ್ಯ ವೈಜನಾಥಪಾಟೀಲ್‌ರವರು ಹೇಳುವುದು ರೆಕಾರ್ಡ್‌ಗೆ ಹೋಗುವುದಿಲ್ಲ. ತಾವು ಹಿರಿಯ ಸದಸ್ಯರಾಗಿದ್ದೀರಿ. ಈ ರೀತಿಯಾಗಿ ನಿಂತುಕೊಂಡು ಯಾವುದೇ ನಿಯಮಗಳನ್ನು ಅನುಸರಿಸದೆ ಈ ರೀತಿಯಾಗಿ ಎದ್ದು ನಿಂತುಕೊಂಡು ಮಾತನಾಡಿದರೆ ಹೇಗೆ? ನನ್ನ ಪರ್ಮಿಶನ್ ಇಲ್ಲದೆ ಮಾತನಾಡಿದರೆ ಹೇಗೆ? ನಾನು ನಿಮಗೆ ನೇಮ್ ಮಾಡಬೇಕು. ತಾವು ಕುಳಿತುಕೊಳ್ಳಿ.